## ರಾಷ್ಟ್ರೀಯ ಉಪಾಧ್ಯಕ್ಷ ಮುಕ್ತಾರ್ ಅಬ್ಬಾಸ್ ನಕ್ವಿಯವರ ಪತ್ರಿಕಾ ಪ್ರಕಟಣೆ

ನವದೆಹಲಿ, ಮಾರ್ಚ್ 14,2013: ದೇಶದ ಭದ್ರತಾ ದೃಷ್ಟಿಯಿಂದ, ಪಾಕಿಸ್ತಾನ ನಿರ್ಮಿಸಿರುವ ಆತಂಕದ ಕಾರ್ಖಾನೆಗಳನ್ನು ಧ್ವಂಸಗೊಳಿಸುವ ಸಮಯ ಪಕ್ವವಾಗಿದೆ ಎಂದು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಮುಕ್ತಾರ್ ಅಬ್ಬಾಸ್ ನಕ್ವಿ ತಿಳಿಸಿದ್ದಾರೆ.

ಸ್ನೇಹಪರ ಸಂಬಂಧ ಪ್ರೋತ್ಸಾಹಿಸುವ ನೆಪದಲ್ಲಿ ಪಾಕಿಸ್ತಾನ ದೀರ್ಘಾವಧಿಯಿಂದ ಆತಂಕವಾದದ ಕೃತ್ಯಗಳಿಗೆ ಪ್ರೊತ್ಸಾಹ ನೀಡುತ್ತಿದೆ ಎಂದು ಶ್ರೀ ನಕ್ವಿ ತಿಳಿಸಿದ್ದಾರೆ. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯುವ ಸಮಯ ಬಂದಿದೆ. ಪಾಕಿಸ್ತಾನದ ಮನಸ್ಥಿತಿಯು ಶಾಂತಿಯ ಮಾತುಗಳನ್ನು ಅರ್ಥ ಮಾಡಿಕೊಳ್ಳಲು ಅಸಮರ್ಥವಾಗಿದೆ. ಬಾಯಲ್ಲಿ ಶಾಂತಿಯ ಪಠಣ, ಕಾರ್ಯದಲ್ಲಿ ಭಯೋತ್ಪಾದನಾ ಪ್ರಕರಣ ನಡೆಸಿದೆ. ನಮ್ಮ ದೇಶದ ಒಬ್ಬ ಸೈನಿಕನ ಬಲಿದಾನವನ್ನು ಮರೆಯಲು ಅಸಾಧ್ಯವಾಗಿರುವಾಗ, ಮತ್ತೊಮ್ಮೆ ಇನ್ನೊಬ್ಬ ಸೈನಿಕನ ಬಲಿದಾನವನ್ನು ಎದುರಿಸುವ ಪರಿಸ್ಥಿತಿ ಎದುರಿಸುವ ತಾಳ್ಮೆಹೊಂದಿಲ್ಲ. ಕೇಂದ್ರ ಸರ್ಕಾರವು ನಮ್ಮ ಸಶಸ್ತ್ರ ಪಡೆಗಳಿಗೆ ಬಂದೂಕಿನ ಬದಲು ಲಾಠಿಯನ್ನು ನೀಡಿರುವುದು ಕಳವಳದ ಸಂಗತಿಯಾಗಿದ್ದು, ಸುಸಜ್ಜಿತ ಶಸ್ತ್ರಾಸ್ತ್ರಗಳಿಂದ ಕೂಡಿದ ಭಯೋತ್ಪಾದಕರನ್ನು ನಿರಾಯುಧರಾದ ನಮ್ಮ ಸೈನಿಕರು ಹೋರಾಡಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಲಾಗಿದೆ.

ಕಾಶ್ಮೀರದ ವಿಚಾರ ಕುರಿತು ರಾಜ್ಯಸಭೆಯಲ್ಲಿ ಮಾತನಾಡಿದ ಶ್ರೀ ನಕ್ವಿಯವರು, ಪ್ರತಿಯೊಂದು ಆತಂಕವಾದದ ಘಟನೆ ನಡೆದ ಬಳಿಕ ಒಂದೇ ಹೇಳಿಕೆಯನ್ನು ಪುನರುಚ್ಛರಿಸುವ ಸರ್ಕಾರ ಅಲ್ಲಿಗೆ ತನ್ನ ಕರ್ತವ್ಯ ಮುಗಿಯಿತು ಎಂದು ಮತ್ತೊಂದು ಪ್ರಕರಣ ನಡೆಯುವವರೆಗೂ ಮೌನ ವಹಿಸುತ್ತದೆ ಎಂದು ತಿಳಿಸಿದ್ದಾರೆ.

ಆತಂಕವಾದದ ಪ್ರಕರಣಗಳು ಹೆಚ್ಚುತ್ತಿದ್ದು, ಜನ ಕ್ರೋಧಿತರಾಗಿದ್ದಾರೆ ಎಂದು ತಿಳಿಸಿದ ಶ್ರೀ ನಕ್ವಿಯವರು, ಭಯೋತ್ಪಾದನೆ ಹಾಗೂ ದೇಶದ ಭದ್ರತೆ ವಿಚಾರದಲ್ಲಿ ಮೃದು ಧೋರಣೆ ಕೈಬಿಟ್ಟು ಆಕ್ರಮಣಕಾರಿ ಮನೋಭಾವವನ್ನು ಬೆಳೆಸಿಕೊಳ್ಳಬೇಕೆಂದು ಬಯಸುತ್ತದೆ ಎಂದು ಅಭಿಪ್ರಾಯ ಪಟ್ಟರು. ಪಾಕಿಸ್ತಾನಕ್ಕೆ ಅರ್ಥವಾಗುವ ಭಾಷೆಯಲ್ಲೇ ಸರ್ಕಾರ ಉತ್ತರ ನೀಡಬೇಕು.

ಭಾರತದ ವಿರುದ್ಧ ಜಿಹಾದ್ ಸಾರಬೇಕು ಎಂದು ಅಫಘಾನಿಸ್ತಾನದ ಟಿವಿ ವಾಹಿನಿಯಲ್ಲಿ, ಪಾಕಿಸ್ತಾನದ ಸಂಸದೀಯ ಸಂಸ್ಥೆಯ ಸದಸ್ಯನೊಬ್ಬ ಸ್ವಲ್ಪ ಸಮಯದ ಹಿಂದೆ ಹೇಳಿಕೆ ನೀಡಿದ್ದನೆಂದು ಶ್ರೀ ನಕ್ವಿ ಸ್ಮರಿಸಿಕೊಂಡರು. ಈ ರೀತಿ ಭಾರತ ವಿರೋಧಿ ಹೇಳಿಕೆ ನೀಡಿದರೂ ಸಹ, ಪಾಕಿಸ್ತಾನ ಸರ್ಕಾರಕ್ಕೆ ತಕ್ಕ ಉತ್ತರವನ್ನು ನಮ್ಮ ಸರ್ಕಾರ ನೀಡಲಿಲ್ಲ.

## ಭಾಜಪ ರಾಷ್ಟ್ರೀಯ ಉಪಾಧ್ಯಕ್ಷ ಶ್ರೀ ಮುಖ್ತಾರ್ ಅಬ್ಬಾಸ್ ನಕ್ವಿಯವರ ಪತ್ರಿಕಾ ಪ್ರಕಟಣೆ

**ನವದೆಹಲಿ, ಮಾರ್ಚ್ 14, 2013:** ದೇಶದ ಸುರಕ್ಷತೆ ದೃಷ್ಟಿಯಿಂದ, ಪಾಕಿಸ್ತಾನದಲ್ಲಿರುವ ಭಯೋತ್ಪಾದನಾ ಕಾರ್ಖಾನೆಗಳು ಹಾಗೂ ಶಿಬಿರಗಳನ್ನು ಧ್ವಂಸಗೊಳಿಸಲು ಕಾರ್ಯೋನ್ಮುಖರಾಗಬೇಕಾಗಿದೆ ಎಂದು ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಉಪಾಧ್ಯಕ್ಷರಾದ ಶ್ರೀ ಮುಖ್ತಾರ್ ಅಬ್ಬಾಸ್ ನಕ್ವಿ ತಿಳಿಸಿದ್ದಾರೆ.

ಶಾಂತಿ ಹಾಗೂ ಸ್ನೇಹದ ಮಾತುಗಳು ಸಾಕೆಂದು ಶ್ರೀ ನಕ್ವಿ ತಿಳಿಸಿದ್ದಾರೆ. ಪಾಕಿಸ್ತಾನ ಹಾಗೂ ಅದರ ವ್ಯವಸ್ಥಿತ ಭಯೋತ್ಪಾದನೆ ಜಾಲಕ್ಕೆ ಅರ್ಥವಾಗುವ ಭಾಷೆಯಲ್ಲೇ ಉತ್ತರ ನೀಡುವ ಅಗತ್ಯವಿದೆ ಎಂದು ಹೇಳಿದ್ದಾರೆ. ಪ್ರಶಾಂತ ಮನಸ್ಥಿತಿ ಇಲ್ಲದಾಗ ಶಾಂತಿ ಸಾಧಿಸಲು ಆಗದು. ಪಾಕಿಸ್ತಾನ ಬಾಯಲ್ಲಿ ಶಾಂತಿ ಮಾತನಾಡುತ್ತದೆ ಆದರೆ ಕ್ರಿಯೆಯಲ್ಲಿ ಆತಂಕ ಹರಡುತ್ತಿದೆ.

ಹುತಾತ್ಮರ ಅಗಲಿಕೆಯಿಂದ ಚೇತರಿಸಿಕೊಳ್ಳದ ರಾಷ್ಟ್ರ, ನಮ್ಮ ಸೈನಿಕರ ಸಾವನ್ನು ಸಹಿಸಿಕೊಳ್ಳಲು ಹೇಗೆ ಸಾಧ್ಯವೆಂದು ಶ್ರೀ ನಕ್ವಿ ಪ್ರಶ್ನಿಸಿದ್ದಾರೆ. ಬೇಸರದ ಸಂಗತಿಯೆಂದರೆ, ಕೇಂದ್ರ ಭದ್ರತಾ ಪಡೆಗಳ ಸೈನಿಕರ ಬಂದೂಕುಗಳನ್ನು ಹಿಂಪಡೆದು ಅವರಿಗೆ ಕೋಲು ನೀಡಲಾಗಿದೆ. ನಿಶಸ್ತ್ರರಾಗಿ ಶಸ್ತ್ರಸಜ್ಜಿತ ಭಯೋತ್ಪಾದಕರೊಂದಿಗೆ ಸೆಣೆಸಾಡುವಂತೆ ಹೇಳಲಾಗುತ್ತಿದೆ.

ನಿನ್ನೆ ರಾಜ್ಯಸಭೆಯಲ್ಲಿ ಕಾಶ್ಮೀರ ವಿಚಾರದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ ಶ್ರೀ ನಕ್ವಿಯವರು, ಪ್ರತಿಯೊಂದು ಭಯೋತ್ಪಾದನಾ ಧಾಳಿಯ ನಂತರ ಸರ್ಕಾರ ತಮ್ಮ ಗಿಣಿ ಪಾಠ ಒಪ್ಪಿಸುವ ಮೂಲಕ ದೇಶಕ್ಕಾಗಿ ಬಲಿದಾನ ನೀಡಿದ ಸೈನಿಕರ ಹಾಗೂ ಜನಸಾಮಾನ್ಯರ ಕುರಿತು ತನ್ನ ಹೊಣೆಗಾರಿಕೆ ವಿಧಿ ಪೂರ್ಣಗೊಳಿಸಿ, ಮುಂದೆ ಭಯೋತ್ಪಾದನೆಯ ಘಟನೆ ಆಗುವವರೆಗೂ ಕಾದು ಕೂಡುತ್ತದೆ, ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಹೆಚ್ಚುತ್ತಿರುವ ಭಯೋತ್ಪಾದನೆ ಧಾಳಿಗಳಿಂದ ದೇಶ ಬೇಸತ್ತಿದ್ದು, ಸರ್ಕಾರ ತನ್ನ ಮೃದು ಹಾಗೂ ದುರ್ಬಲ ನಿಲುವನ್ನು ತೊಡೆಯಬೇಕು ಎಂದು ಬಯಸುತ್ತದೆ. ಬಲಿಷ್ಠ ಹಾಗೂ ಆಕ್ರಮಣಕಾರಿ ನಿಲುವನ್ನು ಗ್ರಹಿಸಿ, ಪಾಕಿಸ್ತಾನಕ್ಕೆ ಅದರ ಭಾಷೆಯಲ್ಲೇ ಉತ್ತರಿಸಬೇಕು.

ಅಫಘಾನಿಸ್ಥಾನದ ಸುದ್ದಿವಾಹಿನಿಯಲ್ಲಿ ಇತ್ತೀಚೆಗೆ ಸಂದರ್ಶನ ನೀಡಿದ ಪಾಕಿಸ್ತಾನ ಸರ್ಕಾರದ ಸಂವೈಧಾನಿಕ ಸಂಸ್ಥೆಯ ಸದಸ್ಯನೊಬ್ಬ, ಭಾರತದ ವಿರುದ್ಧ ಜಿಹಾದ್ ಸಾರುವಂತೆ ಘೋಷಿಸಿದ ವಿಚಾರವನ್ನು ಶ್ರೀ ನಕ್ವಿ ತಿಳಿಸಿದರು. ಭಾರತದ ವಿರುದ್ಧ ಇಂತಹ ಘೋಷಣೆ ಮಾಡಿದ ನಂತರವೂ ಭಾರತ ಸರ್ಕಾರ ಪಾಕಿಸ್ತಾನದ ಸರ್ಕಾರವನ್ನು ಈ ಕುರಿತು ಪ್ರಶ್ನಿಸಿಲ್ಲ.

(ಓ.ಪಿ.ಕ್ಕೊಲಿ)

ಮುಖ್ಯ ಕಚೇರಿ ಪ್ರಭಾರಿ